ಈ) ಸದರಿ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಿದೆಯೇ: ನೀಡಿದ್ದಲ್ಲಿ ಎಂದಿನಿಂದ ಕೆಲಸ ಪ್ರಾರಂಭಿಸುತ್ತೀರಿ:

ಶ್ರೀ ಎಂ. ಶಿವಣ್ಣ (ತೋಟಗಾರಿಕೆ ಸಚಿವರು)

ಅ) ಬ್ಯಾಲವಾಡಗಿ ಫಾರ್ಮನ ವಿಸ್ತೀರ್ಣ 27 ಎಕರೆಗಳು.

ಈ ಕ್ಷೇತ್ರದಲ್ಲಿ ತೆಂಗು, ಮಾವು, ಸಪೋಟ, ನಿಂಬೆ ಬೋರೆ, ದಾಳಿಂಬೆ ಇತ್ಯಾದಿ ತೋಟಗಾಗಿಕೆ ಬೆಳೆಗಳನ್ನು ಬೆಳೆಸಲಾಗಿದೆ.

ಬಂದಿದೆ.

ಆ) ಏಳು ವರ್ಷಗಳಿಂದ ಇದೆ.

ಈ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ. ಜಿಲ್ಲಾ ಪಂಚಾಯತ್‌ನಿಂದ ಅನುದಾನ ಬಿಡುಗಡೆ ಆಗಬೇಕಾಗಿದೆ.

ಇ) 34.10 ಲಕ್ಷಗಳು.

2000–2001ನೇ ಸಾಲಿಗೆ ಸದರಿ ಯೋಜನೆಯ ಪರಿಷ್ಕೃತ ಅಂದಾಜು ರೂ 57.37 ಲಕ್ಷಗಳಾಗಿರುತ್ತದೆ.

ಹಣ ಬಿಡುಗಡೆ ಮಾಡದ ಕಾರಣ ಈ ಯೋಜನೆ ಕಾರ್ಯಗತವಾಗಿರುವುದಿಲ್ಲ. ಅಧಿಕಾರಿಗಳಿಂದ ವಿಳಂಭವಾಗಿಲ್ಲದ ಕಾರಣ ವಿವರ ನೀಡುವುದು ಮತ್ತು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ನೀಡಲಾಗಿದೆ.

ಜಿಲ್ಲಾ ಪಂಚಾಯತ್. ಗದಗ್‌ನಿಂದ ಹಣ ಬಿಡುಗಡೆಯಾದ ಕೊಡಲೆ ಕೆಲಸ ಪ್ರಾರಂಭಿಸಲಾಗುವುದು.

ಕರ್ನಾಟಕ ರಾಜ್ಯ ಸರ್ಕಾರಿ ಅಪೆಕ್ಸ್ ಬ್ಯಾಂಕ್‌ನಲ್ಲಿ ನಿಯಮ ಬಾಹಿರವಾಗಿ ಸಿಬ್ಬಂದಿ ನೇಮಕ

3226 (3642) ಶ್ರೀ ಪಾಟೀಲ್ ಸಿದ್ದಲಿಂಗನಗೌಡ (ಮುಂಡರಗಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್‌ನಲ್ಲಿ ನಿಯಮ ಬಾಹಿರವಾಗಿ ಸಿಬ್ಬಂದಿಯನ್ನು ನೇಮಿಸಿಕೊಂಡ ಆಡಳಿತ ಮಂಡಳಿ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ;

ಆ) ನಿಯಮ ಬಾಹಿರವಾಗಿ ನೇಮಿಸಿಕೊಂಡಿದ್ದಕ್ಕೆ ವ್ಯವಸ್ಥಾಪಕ ನಿರ್ದೇಶಕರು ಸಹಮತ ವ್ಯಕ್ತಪಡಿಸಿದ್ದರೇ ಅಥವಾ ಇಲ್ಲವೇ?

ಶ್ರೀ ಹೆಚ್. ವಿಶ್ವನಾಥ (ಸಹಕಾರ ಸಚಿವರು)

ಅ) ಆ) ವಿಷಯವನ್ನು ಪರೀಕ್ಷಿಸಲಾಗುತ್ತಿದೆ. ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ನೋಡಿದ ನಂತರವೇ ವಸ್ತು ಸ್ಥಿತಿಯನ್ನು ಖಚಿತ ಪಡಿಸಿಕೊಂಡು ತೀರ್ಮಾನಕ್ಕೆ ಬರಬಹುದು.

ಬೀದರ್ ಜಿಲ್ಲೆಯ ಮಾಂಜ್ರಾ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಿಸುವುದು

3227 (3651) ಶ್ರೀ ಪ್ರಕಾಶ್ ಖಂಡ್ರೆ (ಬಾವ್ಕಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?